# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 961 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 27-12-2022. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜವಳಿ ನೀತಿ ಜಾರಿಯಲ್ಲಿದೆಯೇ; (ಹಾಗಿದ್ದಲ್ಲಿ, ಜವಳಿ ನೀತಿಯ ಬಗ್ಗೆ ಸಂಕ್ಷಿಪ್ತವಾದ ವಿವರ ನೀಡುವುದು) | ರಾಜ್ಯದಲ್ಲಿ ಜವಳಿ ಆಧಾರಿತ ಚಟುವಟಿಕೆಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ದಿನಾಂಕ: 04-11-2019 ರಂದು "ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24" ನ್ನು ಜಾರಿಗೆ ತಂದಿರುತ್ತದೆ.<br><br>ಸದರಿ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಉದ್ಯಮಿ ಸ್ನೇಹಿಯನ್ನಾಗಿಸಲು ಸರ್ಕಾರವು ಸದರಿ ನೀತಿಯಲ್ಲಿ ದಿನಾಂಕ:02-08-2022 ರಂದು ತಿದ್ದುಪಡಿಗಳನ್ನು ಮಾಡಿ ಜಾರಿಗೆ ತಂದಿದೆ. ಸಂಕ್ಷಿಪ್ತವಾದ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| (ಆ) | ಸರ್ಕಾರವು ಜವಳಿ ನೀತಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾದ ಯೋಜನೆಗಳಾವುವು? (ವಿವರವನ್ನು ನೀಡುವುದು) | ರಾಜ್ಯದಲ್ಲಿ ಹೊಸದಾಗಿ ಬಂಡವಾಳ ಹೂಡಲಾದ ಜವಳಿ ಉದ್ಯಮಗಳಿಗೆ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ ಯೋಜನೆಯ ವಿವಿಧ ಕಾಂಪೋನೆಂಟ್‌ಗಳ ವಿವರ ಈ ಕೆಳಗಿನಂತಿದೆ:-<br>• ಸಾಲ ಆಧಾರಿತ ಬಂಡವಾಳ ಸಹಾಯಧನ.<br>• ಬಡ್ಡಿ ಸಹಾಯಧನ.<br>• ವಿದ್ಯುತ್ ಸಹಾಯಧನ.<br>• ನೌಕರರ ರಾಜ್ಯ ವಿಮೆ(ಇಎಸ್‌ಐ) ಮತ್ತು ನೌಕರರ ಭವಿಷ್ಯ ನಿಧಿ(ಇಪಿಎಫ್) ಸಹಾಯಧನ.<br>• ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ರಿಯಾಯಿತಿ ಶುಲ್ಕಗಳು.<br>• ಅಸ್ತಿತ್ವದಲ್ಲಿರುವ ಮತ್ತು ನೂತನ ಉದ್ಯಮಗಳಿಗೆ ವಿಸರ್ಜನೆ ಸಂಸ್ಕರಣಾ ಘಟಕ. |

ಸಂಖ್ಯೆ: CI 300 JAKE 2022

(ಶಂಕರ ಬ. ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ
ಕಬ್ಬು ಅಭಿವೃದ್ಧಿ ಸಚಿವರು